ಕರ್ನಾಟಕ ಸರ್ಕಾರ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಮಾತು ಕತೆ



ಕೊಡಗು

Volume 1 | ಜನವರಿ 2023

## ಗ್ರೇಡ್–1 ಪೊನ್ನಂಪೇಟೆ ಗ್ರಾಮ ಪಂಚಾಯಿತಿ

### ಅಧ್ಯಕ್ಷರ ಸಂದೇಶ (ಪ್ರಕಾಶಕರು)



ಗ್ರಾಮೀಣ ಜನರ ಜೀವನವು ಗುಣಮಟ್ಟವಾದ ಹಂತಕ್ಕೆ ತಲುಪಲು ವಿಕೇಂದ್ರಿಕರಣದ ಪಂಚಾಯತ್ ರಾಜ್ ಸಂಸ್ಥೆಗಳು ಸಹಕಾರಿಯಾಗಿವೆ. ಇವುಗಳ ಸಬಲೀಕರಣದಿಂದ ಮಾತ್ರದಿಂದವೇ ಗಾಂಧೀಜಿಯವರ ಕನಸು ಸಾಕಾರಗೊಳ್ಳುವುದು. ಆದ್ದದರಿಂದ ಆರ್ಥಿಕ ಸಾಮಾಜಿಕ ರಾಜಕೀಯ ಹಾಗೂ ಮೂಲಭೂತ ವ್ಯವಸ್ಥೆಗಳ ಕಲ್ಪಿಸುವ ಜವಾಬ್ದಾರಿ ಗ್ರಾಮ ಪಂಚಾಯಿತಿಗಳ ಮೇಲಿದೆ. ಅಂತೆಯೇ ನಮ್ಮ ಪೊನ್ನಂಪೇಟೆ ಗ್ರಾಮ ಪಂಚಾಯಿತಿಯು ಮಾತು ಕತೆ ಇ–ಪತ್ರಿಕೆಯ ಮೂಲಕ ಅಭಿವೃದ್ಧಿಯ ಮುನ್ನೋಟದ ನೈಜತೆಯ ಅನಾವರಣಕ್ಕೆ ವೇದಿಕೆಯಾದಂತಾಗಿದ್ದು ಇದಕ್ಕೆ ಕಾರಣೀಭೂತರಾದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಾ ಇನ್ನೂ ಅತ್ಯುತ್ತಮವಾಗಿ ನಿಜಕತೆಗಳ ದರುಶನ ನೀಡಲು ಬದ್ಧರಾಗಿ ಮಾತುಕತೆ ಇ–ಪತ್ರಿಕೆ ಮುಂದುವರೆಸಲು ಕೌತುಕರಾಗಿರುವುದಾಗಿ ಈ ಮೂಲಕ ತಿಳಿಯಪಡಿಸುತ್ತೇನೆ. **– ಶ್ರೀಮತಿ ಗಿರಿಜಾ ವೆಂಕಟೇಶ್**

### ಪಿ.ಡಿ.ಓ ರವರ ಸಂದೇಶ (ಸಂಪಾದಕರು)



ಪ್ರಜಾಪ್ರಭುತ್ವದ ವ್ಯವಸ್ಥೆಯ ಅರ್ಥಪೂರ್ಣ ರೂಪ ಅದು ವಿಕೇಂದ್ರಿಕರಣ ವ್ಯವಸ್ಥೆ ಇದರ ಸಾರ್ಥಕತೆಯು ಪಂಚಾಯತ್ ರಾಜ್ ಸಂಸ್ಥೆಗಳಿಂದ ಪರಿಪೂರ್ಣ ರೂಪ ಪಡೆದಿರುವುದು ಹೆಗ್ಗಳಿಕೆ. ಕರ್ನಾಟಕ ರಾಜ್ಯದಲ್ಲಿ ಕಾಯ್ದೆಯು ಜಾರಿಯಾದ ಅಂದಿನಿಂದ ಕ್ರಾಂತಿಕಾರಕವಾದ ರೀತಿಯಲ್ಲಿ ಕರ್ನಾಟಕ ರಾಜ್ಯದ ಪಂಚಾಯಿತಿ ವ್ಯವಸ್ಥೆ ಮೇಲುಸ್ತರಕ್ಕೆ ಹೋಗಿರುವುದು ಅತೀವ ಸಂತೋಷ ನೀಡಿರುತ್ತದೆ. ಅಭಿವೃದ್ಧಿ ಆಯಾಮಗಳ ಮಾಹಿತಿಯು ಜನ ಮಾನಸಕ್ಕೆ ತಲುಪುವುದು ಸಾಮಾಜಿಕ ಮಾಧ್ಯಮಗಳ ಮೂಲಕ. ಆ ಮೂಲಕ ಜನರಿಗೆ ಅಂಗೈಯಲ್ಲಿ ತಿಳಿಯುವ ವಿಫುಲ ಅವಕಾಶಗಳಿವೆ. ಇದರ ಭಾಗವಾಗಿ ಮಾತುಕತೆ ಎಂಬ ಇ– ಪತ್ರಿಕೆ ಹೊರತರಲು ಅತೀವವಾದ ಖುಷಿಯ ಸಂಗತಿಯಾಗಿದೆ. ಮಾತುಕತೆ ಎಂಬ ಇ–ಪತ್ರಿಕೆ ಹೊರ ತರಲು ಅನುವು ಮಾಡಿಕೊಟ್ಟ ಘನ ಸರ್ಕಾರಕ್ಕೆ ಹಾಗೂ ಹಿರಿಯ ಅಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ಇದರ ಫಲವತ್ತತೆಯು ಬಹು ಪ್ರಯೋಜನಕಾರಿಯಾಗಿದ್ದು ನಮ್ಮ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಪಥದ ಬಹು ಆಯಾಮಗಳನ್ನು ಜನರ ಮುಂದೆ ತೆರೆದಿಡಲು ಅತ್ಯುತ್ತಮವಾದ ವೇದಿಕೆಯಾಗಿದೆ.**– ಶ್ರೀ ಪುಟ್ಟರಾಜು ಆರ್. ಜೆ.**

### ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಸಂದೇಶ



ಕೊಡಗು ಜಿಲ್ಲೆಯಾದ್ಯಂತ ಅತಿ ಹೆಚ್ಚು ಒತ್ತು ನೀಡಿ ಸಂಜೀವಿನಿ ಒಕ್ಕೂಟದ ಮಹಿಳೆಯರನ್ನು ಪ್ರೋತ್ಸಾಹಿಸಲಾಗುತ್ತಿದೆ. ಇದರ ಪ್ರಮುಖ ಭಾಗವಾಗಿ ಕಸ ಸಂಗ್ರಹಣೆಯಲ್ಲಿ ಆದಾಯದ ಮೂಲವನ್ನು ಗಳಿಸುವ ನಿಟ್ಟಿನಲ್ಲಿ ಮಹಿಳಾ ಒಕ್ಕೂಟಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಮಾನ್ಯ ಸರ್ಕಾರದ ಮಾರ್ಗದರ್ಶನದಂತೆ ಮನೆ ಮನೆಗೆ ತಲುಪಿಸುವ ಪ್ರಯತ್ನ ಮಾಡಲಾಗುತ್ತಿದೆ. ಸರ್ಕಾರದಿಂದ ಸಿಗುವ ಸೌಲಭ್ಯವನ್ನು ಫಲಾನುಭವಿಗಳಿಗೆ ತಲುಪಿಸುವ ಕೆಲಸವನ್ನು ನಮ್ಮ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಸಹಯೋಗದಲ್ಲಿ ಮಾಡಲಾಗಿದೆ. **– ಡಾ. ಆಕಾಶ್ ಎಸ್. (ಭಾ.ಆ.ಸೇ)**

### ನಮ್ಮಲ್ಲೇ ಮೊದಲು...!

ಕಳೆದ ಸುಮಾರು 40 ವರ್ಷಗಳಿಂದ ಕಸದ ರಾಶಿಯಾಗಿದ್ದ ಸ್ಥಳವನ್ನು ಬದಲಾಯಿಸಬೇಕೆಂಬ ಹಠದೊಂದಿಗೆ ಇಂದು ಉದ್ಯಾನವನವಾಗಿ ಮಾರ್ಪಡಿಸಲು ದಿಟ್ಟ ಹೆಜ್ಜೆ ಇಡಲಾಗಿದೆ. ಪೊನ್ನಂಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಳೆದ 40 ವರ್ಷಗಳಿಂದ ಕಸದ ರಾಶಿ ಹೊಂದಿದ್ದ ಸ್ಥಳವನ್ನು ಕರ್ನಾಟಕದಲ್ಲಿಯೇ ಪ್ರಥಮವೆಂಬಂತೆ ಡಂಪ್ ಯಾರ್ಡ್ ನಿಂದ ಉದ್ಯಾನವನವಾಗಿ ಬದಲಾಯಿಸಲು ಬುನಾದಿ ಹಾಕಲಾಗಿದೆ. ಈಗಾಗಲೇ 15 ಮೆಟ್ರಿಕ್ ಟನ್ನಿನಷ್ಟು ಕಸದ ರಾಶಿಯನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗಿದ್ದು ಕಾರ್ಯ ಪ್ರಗತಿಯಲ್ಲಿರುತ್ತದೆ. ಇದು ರಾಜ್ಯದಲ್ಲಿಯೇ ಪ್ರಪ್ರಥಮ ಕಾರ್ಯವಾಗಿರುವುದು ಹೆಗ್ಗಳಿಕೆ ವಿಷಯವಾಗಿದೆ.





### ಸರಕಾರಿ ಹುದ್ದೆಗಳ ಅಧಿಸೂಚನೆಗಳು

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ವಿವಿಧ ಹುದ್ದೆಗಳು

https://kpsc.kar.nic.in

### ಗ್ರಾಮೀಣ ಗ್ರಂಥಾಲಯಕ್ಕೆ ಡಿಜಿಟಲ್ ಸ್ಪರ್ಶ..

ಕಲಿಕೆಯ ಸಂಪನ್ಮೂಲಗಳು ಏಕ ಗವಾಕ್ಷಿ ಮೂಲಕ ಸಮುದಾಯಕ್ಕೆ ಲಭ್ಯವಾಗುವಂತೆ ಮಾಡುವ ಪ್ರಯತ್ನದೊಂದಿಗೆ ಗ್ರಾಮೀಣ ಗ್ರಂಥಾಲಯದ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವುದರೊಂದಿಗೆ ಡಿಜಿಟಲೀಕರಣಗೊಳಿಸಲಾಗಿದೆ. ಹದಿನೈದನೇ ಹಣಕಾಸು ಯೋಜನೆ ಮತ್ತು ಸ್ವಂತ ಸಂಪನ್ಮೂಲದ ಅನುದಾನಗಳನ್ನು ಬಳಸಿಕೊಂಡು ಹಾಲಿ ಸಾರ್ವಜನಿಕ ಗ್ರಂಥಾಲಯವನ್ನು ಮೇಲ್ದರ್ಜೆಗೇರಿಸಲಾಗಿದೆ ಇಲ್ಲಿ ಇ–ಪುಸ್ತಕಗಳು, ಜರ್ನಲ್‌ಗಳು, ವಿಡಿಯೋಗಳು, ಸಿಮ್ಯುಲೇಶನ್‌ಗಳು, ಅಂತರ್ಜಾಲ, ಸುಸಜ್ಜಿತ ಕಂಪ್ಯೂಟರ್, ಸ್ಮಾರ್ಟ್ ಟಿವಿ ಇತ್ಯಾದಿ ವ್ಯವಸ್ಥೆಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ಬಳಸಲು ಅವಕಾಶ ಮಾಡಿಕೊಡಲಾಗಿದೆ. ವಿಶೇಷ ಚೇತನ ಓದುಗರಿಗೆ ಆಡಿಯೋ ಬುಕ್ಸ್, ಬ್ರೈಲ್ಲಿಪಿ ಪುಸ್ತಕಗಳು, ಸುಲಭ ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆ. ಕರ್ನಾಟಕ ಸರ್ಕಾರದ "ಓದುವ ಬೆಳಕು" ಮತ್ತು "ಪುಸ್ತಕ ಜೋಳಿಗೆ" ಕಾರ್ಯಕ್ರಮಗಳಡಿ ಗ್ರಾಮೀಣ ಮಕ್ಕಳನ್ನು ಕಲಿಕೆಯ ಮಡಿಲಿಗೆ ತರುವ ಗುರಿಯೊಂದಿಗೆ ಪುಸ್ತಕಗಳನ್ನು ಓದಲು ಮತ್ತು ಎರವಲು ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಯಾವುದೇ ಮಕ್ಕಳು ಓದಿನಿಂದ ಹೊರಗುಳಿಯದಂತೆ ಖಚಿತಪಡಿಸಿಕೊಳ್ಳಲು ಗ್ರಂಥಾಲಯ ಸದಸ್ಯತ್ವ ನೋಂದಾವಣಿಯನ್ನು ಉಚಿತವಾಗಿ ಮಾಡಲಾಗುತ್ತಿದೆ. ಸಾರ್ವಜನಿಕ ಓದುಗರು ಇದರ ಸದುಪಯೋಗ ಪಡೆದುಕೊಂಡು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.



### ಸ್ವಚ್ಛತೆಯೇ ದೇವಾಲಯ..



ಸ್ವಚ್ಛತೆಯು ಇಂದು ಪ್ರಮುಖ ಆದ್ಯತಾ ವಿಷಯವಾಗಿದೆ. ಕೊರೊನಾ ಸಾಂಕ್ರಮಿಕ ರೋಗವು ಇದರ ಮಹತ್ವಸಾರಿದೆ. ಹಾಗೆಯೇ ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು ಪರಿಸರದ ಬಗೆಗಿನ ಸ್ವಚ್ಛತೆಯ ಅರಿವು ಮೂಡಿಸಿದೆ. ಪೊನ್ನಂಪೇಟೆ ಗ್ರಾಮ ಪಂಚಾಯಿತಿಯಲ್ಲಿ ಕಳೆದ 5 ವರ್ಷಗಳ ಹಿಂದೆ ಕಸದ ರಾಶಿ ಹೊದ್ದು ಮಲಗಿದ್ದ ಪ್ರದೇಶವಾಗಿತ್ತು. ತದನಂತರ ಶುಚಿತ್ವಕ್ಕೆ ಆಧ್ಯತೆ ನೀಡಿ ದೈನಂದಿನ ಉತ್ಪತ್ತಿಯಾಗುವ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ನಿರ್ವಹಿಸಲು ಒತ್ತು ನೀಡಲಾಯಿತು. ಮೊದಲಿಗೆ 2019 ರ ಅಕ್ಟೂಬರ್ 02 ರಿಂದ ಏಕ ಬಳಕೆಯ ಪ್ಲಾಸ್ಟಿಕ್‌ಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ತ್ಯಾಜ್ಯಗಳನ್ನು ಮೂಲದಿಂದಲೇ ಒಣ ಮತ್ತು ಹಸಿ ತ್ಯಾಜ್ಯಗಳನ್ನಾಗಿ ಬೇರ್ಪಡಿಸುವಂತೆ ಜನಜಾಗೃತಿ ಮೂಡಿಸಲಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರತೀ ಮನೆಗಳಿಗೆ ಹಸಿ ಮತ್ತು ಒಣ ತ್ಯಾಜ್ಯಗಳನ್ನು ಪ್ರತ್ಯೇಕಿಸಿ ನೀಡುವಂತಾಗಲು ಪ್ರತ್ಯೇಕ ಚೀಲಗಳನ್ನು ಗ್ರಾಮ ಪಂಚಾಯಿತಿಯಿಂದ ವಿತರಿಸಲಾಗಿದೆ. ಇದರಿಂದಾಗಿ ಸಂಗ್ರಹಿತ ತ್ಯಾಜ್ಯಗಳ ನಿರ್ವಹಣೆ ಕಾರ್ಯವು ಸುಲಭವಾದಂತಾಗಿದೆ. ಸಾರ್ವಜನಿಕರು ಹಸಿ ಕಸಗಳನ್ನು ತಮ್ಮ ತಮ್ಮ ಮನೆಗಳಲ್ಲಿಯೇ ಪೈಪ್ಡ್ ಕಾಂಪೋಸ್ಟಿಂಗ್ ಮೂಲಕ ಜೈವಿಕ ಗೊಬ್ಬರವನ್ನಾಗಿ ಪರಿವರ್ತಿಸಿಕೊಳ್ಳಲು ಉತ್ತೇಜನ ನೀಡಲಾಗಿದೆ. ಪಿಇಪಿ ಬಾಟಲಿಗಳು, ಟೆಟ್ರಾ ಪ್ಯಾಕ್‌ಗಳು, ಪೇಪರ್‌ಗಳಂತಹ ರಿಸೈಕಲ್ ಮಾಡಲು ಸಾಧ್ಯವಾಗುವಂತಹ ಘನ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ನಿರ್ವಹಿಸಿ ರೀಸೈಕ್ಲಿಂಗ್ ಕಾರ್ಖಾನೆಗಳಿಗೆ ಮಾರಾಟ ಮಾಡಿ ಆದಾಯ ಗಳಿಸಲಾಗುತ್ತಿದೆ. ಒಟ್ಟಾರೆಯಾಗಿ ಗ್ರಾಮ ಪಂಚಾಯಿತಿಯು ಇಂದು ಶುಚಿಯಾದ ಪ್ರದೇಶವಾಗಿ ಮಾರ್ಪಟ್ಟಿದ್ದು ಆಡಳಿತ ಮಂಡಳಿ ಹಾಗೂ ಜನರು ಹೆಮ್ಮೆ ಪಡುವಂತಹ ಬದಲಾವಣೆಯಾಗಿದೆ.



### ಬದುಕು ಕಟ್ಟಿಕೊಟ್ಟ "ಸಂಜೀವಿನಿ"..

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಸ್ತ್ರೀಶಕ್ತಿ ಸ್ವ–ಸಹಾಯ ಸಂಘಗಳು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯ ಸಂಜೀವಿನಿ ಒಕ್ಕೂಟ ಕಾರ್ಯಕ್ರಮದಡಿ ಕಡಿಮೆ ಬಡ್ಡಿ ದರದಲ್ಲಿ ಬ್ಯಾಂಕ್ ಸಾಲಗಳನ್ನು ಪಡೆದು ಹೊಲಿಗೆ, ಹೈನುಗಾರಿಕೆ, ಗುಡಿಕೈಗಾರಿಕೆ, ತಿಂಡಿ–ತಿನಿಸುಗಳ ತಯಾರಿಕೆಯಂತಹ ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸಿ ಬದುಕು ಕಟ್ಟಿಕೊಂಡಿರುತ್ತಾರೆ. ಇದು ಗ್ರಾಮೀಣ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸಹಕಾರಿಯಾಗಿದೆ.





### ನರೆಗಾದಡಿ ಮಹಿಳಾ ಸಬಲೀಕರಣ..



ಅಕುಶಲ ಮಹಿಳೆ ಕಾರ್ಮಿಕರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಸಲುವಾಗಿ ಮಹಿಳಾ ಕಾಯಕೋತ್ಸವ ಹಮ್ಮಿಕೊಂಡು ಜಾಬ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. 2021–22 ನೇ ಸಾಲಿನಲ್ಲಿ ಶೇ. 72 ರಷ್ಟು ಮಹಿಳಾ ಅಕುಶಲ ಕಾರ್ಮಿಕರು ನರೇಗಾ ಯೋಜನೆಯಡಿಯಲ್ಲಿನ ಕಾಮಗಾರಿಗಳಲ್ಲಿ ಭಾಗವಹಿಸಿ ಕೂಲಿ ಪಡೆದಿರುತ್ತಾರೆ. ಇದರಿಂದಾಗಿ ಮಹಿಳೆಯರು ಸ್ವಾವಲಂಬಿಗಳಾಗುವುದರೊಂದಿಗೆ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ.

### ಪೋಷಣ್ ಅಭಿಯಾನ್..

ಗ್ರಾಮೀಣ ಭಾಗದ ಶಾಲಾ ಮಕ್ಕಳು, ಹದಿಹರೆಯದವರು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಿಂದಿರಲ್ಲಿ ಪೌಷ್ಠಿಕತೆಯನ್ನು ಹೆಚ್ಚಿಸುವ ಸಲುವಾಗಿ ಗ್ರಾಮ ಪಂಚಾಯಿತಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆಗಳಲ್ಲಿ ಆರೋಗ್ಯ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ "ಪೋಷಣ್ ಅಭಿಯಾನ್" ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದ ಮೂಲಕ ಪೌಷ್ಠಿಕಾಂಶ ಭರಿತ ಆಹಾರ ಸೇವನೆಯ ಮಹತ್ವ, ರಕ್ತಹೀನತೆ ತಡೆಗಟ್ಟುವಿಕೆ ಮುಂತಾದ ವಿಷಯಗಳ ಕುರಿತು ಮಾಹಿತಿ ನೀಡಲಾಗುತ್ತಿದೆ. ಪೌಷ್ಠಿಕ ಆಹಾರಗಳನ್ನು ನಿಗಧಿತವಾಗಿ ನೀಡಲಾಗುತ್ತಿದೆ.



### ಸೌರವಿದ್ಯುತ್ ಚಾಲಿತ ಪರಿಸರ ಸ್ನೇಹಿ ಕಛೇರಿ..

ಗ್ರಾಮ ಪಂಚಾಯಿತಿ ಕಛೇರಿ ವಿದ್ಯುತ್ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಗ್ರಾಮ ಪಂಚಾಯಿತಿ ಕಛೇರಿಗೆ 4000 ವೋಲ್ಟ್ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವುಳ್ಳ ಸೋಲಾರ್ ಚಾಲಿತ ಘಟಕ(Roof top solar system) ವನ್ನು 14 ನೇ ಹಣಕಾಸು ಯೋಜನೆ ಕ್ರಿಯಾಯೋಜನೆಯಡಿ ರೂ. 3,80,000/– ವೆಚ್ಚ ಭರಿಸಿ ಅಳವಡಿಸಲಾಗಿದೆ. ಇದರಿಂದಾಗಿ ಕಛೇರಿಯ ಎಲ್ಲಾ 04 ಗಣಕಯಂತ್ರಗಳು, 35 ಸಿಎಫ್‌ಎಲ್ ಬಲ್ಬುಗಳು, 12 ಫ್ಯಾನ್‌ಗಳು, 02 ಪ್ರಿಂಟರ್, 08 ಚಾನಲ್ ಸಾಮರ್ಥ್ಯದ ಸಿಸಿ ಟಿವಿ ವ್ಯವಸ್ಥೆ, 1ಹೆಚ್‌ಪಿ ಸಾಮರ್ಥ್ಯದ ನೀರಿನ ಪಂಪ್ ಹಾಗೂ ಇನ್ನುಳಿತ ಎಲ್ಲಾ ರೀತಿಯ ವಿದ್ಯುತ್ ಬೇಡಿಕೆಯನ್ನು ನೀಗಿಸಲಬಹುದಾಗಿದೆ.





### ಶಾಲೆಗಳಲ್ಲಿ ಶುಚಿತ್ವದ ಅರಿವು ಕಾರ್ಯಕ್ರಮ..

ಬೆಳೆಯುವ ಮಕ್ಕಳಲ್ಲಿ ವೈಯಕ್ತಿಯ ಶುಚಿತ್ವದ ಅರಿವು ಅವರ ಭೌತಿಕ ಮತ್ತು ಶಾರೀಕರ ಬೆಳವಣಿಗೆಯಲ್ಲಿ ಬಹು ಮುಖ್ಯವಾದ ಪಾತ್ರ ವಹಿಸುತ್ತದೆ. ಈ ಸಲುವಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶುಚಿತ್ವದ ಸಂಬಂಧಸಿದಂತೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವಿಶೇಷವಾಗಿ ಹದಿಹರಿಯದ ಹೆಣ್ಣು ಮಕ್ಕಳಿಗೆ ಗ್ರಾಮ ಪಂಚಾಯಿತಿ ವತಿಯಿಂದ ಮರುಬಳಸಬಹುದಾದಂತಹ ಸ್ಯಾನಿಟರಿ ಪ್ಯಾಡ್‌ಗಳ ವಿತರಣೆ, ವಿಶ್ವ ಕೈತೊಳೆಯುವ ದಿನ ಆಚರಣೆ ಹೀಗೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.



### ಪರಿಶ್ರಮಕ್ಕೆ ಒಲಿದ ಪ್ರತಿಫಲ..

- 2016–17 ನೇ ಸಾಲಿನ ಗ್ರಾಂಧಿ ಗ್ರಾಮ ಪುರಸ್ಕಾರ.
- 2019–20 ನೇ ಸಾಲಿನ ಗ್ರಾಂಧಿ ಗ್ರಾಮ ಪುರಸ್ಕಾರ.
- 2020–21 ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ.
- 2016–17 ನೇ ಸಾಲಿನ ಬಯಲು ಬಹಿರ್ದಸೆ ಮುಕ್ತ ಗ್ರಾಮ ಪಂಚಾಯಿತಿ.
- ಜಿಲ್ಲಾ ಮಟ್ಟದ ಸ್ವಚ್ಛ ಸುಂದರ ಶೌಚಾಲಯ ಪ್ರಶಸ್ತಿ.
- ಡಿಜಿಟಲ್ ಗ್ರಂಥಾಲಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ ಪಂಚಾಯತ್ ರತ್ನ ಪ್ರಶಸ್ತಿ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಮಹಿಳಾ ಅಕುಶಲ ಕಾರ್ಮಿಕರ ಹೆಚ್ಚಿನ ಭಾಗವಹಿಸುವಿಕೆಗೆ 2021–22 ನೇ ಸಾಲಿನ ಜಿಲ್ಲಾ ಮಟ್ಟದ ಪ್ರಶಸ್ತಿ.